ದಿನಾಂಕಃ 27-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ** ಆರೋಪಿ ಪರ ವಕೀಲರಿಂದ,

1) ನಾನು ಜ್ಞಾನೋದಯ ಪಬ್ಲಿಕ್ ಶಾಲೆಯಲ್ಲಿ ಶಿಕ್ಷಕನಾಗಿ ಕೆಲಸ ನಿರ್ವಹಿಸುತ್ತಿದ್ದೇನೆ. ಸದರಿ ಶಾಲೆ ಖಾಸಗಿ ಶಾಲೆಯಾಗಿರುತ್ತದೆ. ನಾನು 2018 ನೇ ಸಾಲಿನಲ್ಲಿ ತಮಿಳುನಾಡಿನ ಹೊಸೂರಿನಲ್ಲಿ ವಾಸವಾಗಿದ್ದೆ. ಆ ಸಮಯದಲ್ಲಿ ನಾನು ಹೋಟೆಲ್ ನಿಹಾರಿಕ ದಲ್ಲಿ ಕೆಲಸ ಮಾಡುತ್ತಿದ್ದೆ. ನಾನು ಹೊಸೂರಿನ ಹೋಟೆಲ್ ನಲ್ಲಿ ಕೆಲಸ ಮಾಡುತ್ತಿದ್ದ ಬಗ್ಗೆ ದಾಖಲಾತಿ ಇರುವುದಿಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಹೆಸರು ಸುರೇಶ್. ದೂರಿನಲ್ಲಿ ತಿಳಿಸಿರುವ ವಿಳಾಸ ನನ್ನ ಖಾಯಂ ವಿಳಾಸ ಆಗಿರುತ್ತದೆ.

2) ನಿಪಿ 1 ಚೆಕ್ಕಿನಲ್ಲಿರುವ ಸಹಿ ನನ್ನದಾಗಿರುವುದಿಲ್ಲ. ನಿಪಿ 1 ಚೆಕ್ಕು ನನ್ನ ಬ್ಯಾಂಕಿನ ಖಾತೆಗೆ ಸಂಬಂಧಿಸಿದ ಚೆಕ್ಕಾಗಿರುತ್ತದೆ. ದೂರುದಾರರು ನನಗೆ ಕಳುಹಿಸಿರುವ ತಿಳುವಳಿಕೆ ಪತ್ರ ಜಾರಿಯಾಗಿರುತ್ತದೆ ಎಂದರೆ ಸರಿಯಲ್ಲ. ನನಗೆ ತಿಳುವಳಿಕೆ ಪತ್ರ ಜಾರಿಯಾಗಿದ್ದರೂ ಸಹ ಜಾರಿಯಾಗಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3) ದೂರುದಾರರು ಹಲಗೇಗೌಡನಕೊಪ್ಪಲು ಗ್ರಾಮದ ವಾಸಿ ಎಂದರೆ ನನಗೆ ಗೊತ್ತಿಲ್ಲ. ನಾನು ನಮ್ಮ ಗ್ರಾಮದಿಂದ ಕೆ ಆರ್ ನಗರಕ್ಕೆ ಹಲಗೇಗೌಡನಕೊಪ್ಪಲು ಗ್ರಾಮದ ಮಾರ್ಗವಾಗಿ ಬರಬೇಕು ಎಂದರೆ ಸರಿ. ದೂರಿನಲ್ಲಿ ತಿಳಿಸಿರುವ ವಿಚಾರವನ್ನು ನಾನು ತಿಳಿದುಕೊಂಡಿರುವುದಿಲ್ಲ. ನಾನು ದ್ವಿಚಕ್ರ ವಾಹನ ಖರೀದಿ ಮಾಡಿದ ಬಗ್ಗೆ ದಾಖಲೆ ಇರುವುದಿಲ್ಲ. ಜವರೇಗೌಡರ ಮಗ ಕಾರ್ತಿಕ್ ರವರನ್ನು ವಿಚಾರಣೆ ಮಾಡಲು ನನ್ನ ತೊಂದರೆ ಇರುವುದಿಲ್ಲ. ಜವರೇಗೌಡರವರಿಗೆ ಕಾರ್ತಿಕ್ ಎಂಬ ಮಗ ಇರುವುದಿಲ್ಲ ಎಂದರೆ ಸರಿಯಲ್ಲ. ಜವರೇಗೌಡರವರ ಮಗ ಕಾರ್ತಿಕ್ ಬೆಂಗಳೂರಿನಲ್ಲಿ ವಾಸವಾಗಿರುತ್ತಾರೆ, ಅವರ ವಿಳಾಸ ಗೊತ್ತಿಲ್ಲದ ಕಾರಣ ವಿಚಾರಣೆ ಮಾಡಲು

ಸಾಧ್ಯವಾಗುವುದಿಲ್ಲ. ದೂರುದಾರರಿಂದ ನಾನು ರೂ 1,50,000/- ಹಣ ಸಾಲ ಪಡೆದುಕೊಂಡು ಸಾಲ ಮರುಪಾವತಿಗಾಗಿ ಚೆಕ್ ನೀಡಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ